ಸಂವೇದನೆಯಂತೆ, ಸಾಂದ್ರವಾದ ಕವಿತೆಯಂತೆ ಬದಲಾದರು.

★★★

ಸೆಪ್ಟೆಂಬರ್ ಹದಿನಾರನೆಯ ತಾರೀಖು ಪೊಲೀಸ್ ಸ್ಟೇಶನ್‌ಗೆ ಬರಬೇಕೆಂದು ಸಲೀಮನಿಗೆ ಕರೆ ಬಂತು. ರಾಜ್ಯದಲ್ಲಿ ಹಲವಾರು ಕಡೆ ಬಾಂಬ್ ಸ್ಫೋಟದ ಹಿನ್ನೆಲೆಯಲ್ಲಿ ಸಲೀಮನನ್ನು ವಿಚಾರಣೆ ಮಾಡಬೇಕಾದ ಅವಶ್ಯಕತೆ ಇದೆಯಂತೆ.

ಸ್ಟೇಶನ್‌ಗೆ ಹೋಗುವ ಮುನ್ನ ರಾತ್ರಿ ಯುದ್ಧದ ಕನಸು ಕಂಡ ಸಲೀಮ್. ಸ್ಟೆನ್‌ಗನ್, ಗ್ರೆನೇಡ್‌ಗಳು ತುಂಬಿದ್ದ ಯುದ್ಧದ ನಡುವೆ ಗಾಯಗೊಂಡ ಸಲೀಮನನ್ನು ಸ್ಟ್ರೆಚರ್ ಮೇಲೆ ಒಯ್ಯುತ್ತಿದ್ದರು. ಅವನ ಎರಡೂ ತುಟಿಗಳು ತುಂಡಾಗಿ ಬಿದ್ದಿದ್ದವು.

ತುಟಿಗಳಿಲ್ಲದ ಮುಖದಿಂದ ಅವನು ಯುದ್ಧ ಭೂಮಿಯಿಂದ ಬರುತ್ತಿದ್ದ. ಮನೋರಮ ಎರಡೂ ಕೈಗಳಿಂದ ಅವನ ಮುಖವನ್ನು ಹತ್ತಿರಕ್ಕೆ ತೆಗೆದುಕೊಂಡು ಮುತ್ತಿಡಲು ಹೋಗಿ, ಚಿಟ್ಟನೇ ಚೀರಿದಳು. ಎಚ್ಚರವಾದ ಮೇಲೂ ಸಲೀಮನನ್ನು ಆ ಕೂಗು ಹಿಂಬಾಲಿಸುತ್ತಲೇ ಇತ್ತು.

ಸ್ಟೇಶನ್‌ನಲ್ಲಿ ತುಂಬಾ ಜನ ಹುಡುಗರು ದುಃಖದಿಂದ, ಭಯದಿಂದ ಬಿಳಿಚಿಕೊಂಡ ಮುಖದಿಂದ ನಿಂತಿದ್ದರು. ಯಾರೂ ಜೋರಾಗಿ ಮಾತನಾಡುತ್ತಿರಲಿಲ್ಲ. ಸ್ಟೇಶನ್ ಹೊರಗೆ ಅವರ ತಂದೆತಾಯಿಗಳು. ತಾಯಂದಿರ ಅಳು ಕೇಳಿಸುತ್ತಲೇ ಇತ್ತು.

ಸಲೀಮನಿಗೆ ಅಮ್ಮಿ ನೆನಪಿಗೆ ಬಂದಳು. ಯಾವ ಭಾವೋದ್ವೇಗಗಳಿಲ್ಲದ ಆಮ್ನಿಸಿಯಾಕ್ಕೆ ಒಳಗಾಗಿದ್ದಳು. ದುಃಖ, ಸಂತೋಷ ಯಾವುವೂ ಅಮ್ಮಿಯನ್ನು ಅಂಟುವುದಿಲ್ಲ. ಅಮ್ಮಿಗಿದು ನಿಜವಾಗಿಯೂ ಒಂದು ವರ. ಅಮ್ಮಿಗೆ ಇನ್ನು ಸಲೀಮನ ಕುರಿತು ಆತಂಕವಿರುವುದಿಲ್ಲ.

ಒಂದು ಹಗಲು, ಎರಡು ರಾತ್ರಿ ಕಳೆದವು. ಸಲೀಮನಿಗೆ ನಿದ್ದೆಯಲ್ಲಿ ಯುದ್ಧ ಕುರಿತ ಕನಸುಗಳೆ ಬಂದವು. ಕನಸಿನುದ್ದಕ್ಕೂ ತುಂಡಾದ ಅಂಗಾಂಗಗಳೇ ಕಣ್ಮುಂದೆ ಸುಳಿಯುತ್ತಿದ್ದವು.

ಎರಡನೆ ದಿನ ಬೆಳಿಗ್ಗೆ ಅವನಿಗಾಗಿ ಜೆ.ಬಿ. ರೆಡ್ಡಿ ಎಂಬ ಹುಡುಗ ಬಂದ. ನಾಲ್ಕು ರೊಟ್ಟಿ, ಕೂರ್ಮಾ ಪೊಟ್ಟಣ ತಂದಿದ್ದ. ರೆಡ್ಡಿ ಕತೆಗಳನ್ನು ಬರೆಯುತ್ತಾನೆ. ಎರಡು ಮೂರು ಮೀಟಿಂಗ್‌ಗಳಲ್ಲಿ ಭೇಟಿಯಾಗಿದ್ದ. ಸಲೀಮನ ಅರೆಸ್ಟನ್ನು ಖಂಡಿಸುತ್ತಾ ತುಂಬಾ ಜನ ಕವಿಗಳು, ಲೇಖಕರು ಸಹಿ ಮಾಡಿದ ಮೆಮೋರಾಂಡಮ್ ಅನ್ನು ಜಿಲ್ಲಾಧಿಕಾರಿಗೆ ಕೊಟ್ಟಿದ್ದಾರಂತೆ. ಪತ್ರಿಕೆಗಳಲ್ಲೂ ಸ್ಟೇಟ್‌ಮೆಂಟ್ ಕೊಟ್ಟಿದ್ದಾರಂತೆ. ಬಹುಶಃ ಇವತ್ತು ಸಾಯಂಕಾಲವೋ, ನಾಳೆಯೋ ಬಿಡಬಹುದು ಎಂದು ಹೇಳಿದ.

ಆ ರಾತ್ರಿ ಕೂಡಾ ಸಲೀಂ ಯುದ್ಧದ ಕನಸು ಕಂಡ. ಆದರೆ ಯುದ್ಧದ ನಡುವೆ ಮನೋರಮ ಕಾಣಿಸಿದಳು. ಅವನಿಗಾಗಿ ಆಹಾರವನ್ನು, ಔಷಧಿಗಳನ್ನು ತರುತ್ತಾ, ರೆಡ್‌ಕ್ರಾಸ್ ಸಂಸ್ಥೆಯ ನರ್ಸ್ ರೂಪದಲ್ಲಿದ್ದಳು. ತುಂಡಾದ ಸಲೀಮನ ತುಟಿಗಳನ್ನು ಕೈಯಿಂದ ಸವರಿ ಜೋರಾಗಿ ಅತ್ತಳು. “ಈ ತುಟಿಗಳು ಇಲ್ಲದ ಮುಖವನ್ನು ಏನು ಮಾಡಿಕೊಳ್ಳಲಿ? ಕನಿಷ್ಠ ತುಟಿಗಳಿದ್ದು ನೀನು ಸತ್ತು ಹೋಗಿದ್ದರೂ ಚೆನ್ನಾಗಿತ್ತು. ಹೆಣದೊಂದಿಗಾದರೂ ಸಹ ಜೀವನ ಮಾಡುತ್ತಿದ್ದೆ” ಎಂದು ದೊಡ್ಡ ದನಿಯಲ್ಲಿ ಅಳುತ್ತಿದ್ದಳು.

“ಯುದ್ಧದಿಂದ ತುಂಬಾ ದಣಿದಿದ್ದೇನೆ. ಹತ್ತಿರ ತೆಗೆದುಕೋ ನನ್ನನ್ನು'' ಎಂದು ಸಲೀಮ್ ಬೇಡುತ್ತಿದ್ದ.

“ತುಟಿಗಳು ತುಂಡಾದ ಮುಖವನ್ನು ಹೇಗೆ ಹತ್ತಿರ ತೆಗೆದುಕೊಳ್ಳಲಿ” ಹೊರಡಲು ಸಿದ್ಧವಾದಳು ಮನೋರಮ.